<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>

**<u>ಸಿಸಿ ನಂ.296/2018</u>**

**<u>ಚಾಸಾ-8/ಪಿಡಬ್ಲೂ-3</u>**

| | |
|---|---|
| **ಹೆಸರು** | ಪಲ್ಲಾ ಸತ್ಯಶೀಲರೆಡ್ಡಿ |
| **ತಂದೆ ಹೆಸರು** | ಭೀಮರೆಡ್ಡಿ |
| **ವಯಸ್ಸು** | 64 ವರ್ಷಗಳು |
| **ಉದ್ಯೋಗ** | ನಿವೃತ್ತ ಎಇಇ |
| **ವಾಸ ಸ್ಥಳ** | ಕಲಬುರಗಿ |

**<u>ದಿನಾಂಕ 24.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.</u>**

ದಿನಾಂಕ 05.07.2016 ರಿಂದ 17.10.2019 ರವರೆಗೆ ನಾನು ಎಇಇ ಆಗಿ ಪಿಡಬ್ಲುಡಿ ಇಲಾಖೆ ಜೇವರ್ಗಿಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 02.05.2016 ರಂದು ನೆಲೋಗಿ ಪಿ ಎಸ್ ಐ ರವರು ಟಿಪ್ಪರ ನಂ.ಕೆಎ-32/ಸಿ-3588 ರಲ್ಲಿನ ಮರಳನ್ನು ನಮಗೆ ಹಸ್ತಾಂತರಿಸಿ ಅದರ ಪರಿಮಾಣ ಮತ್ತು ಮೌಲ್ಯವನ್ನು ತಿಳಿಸಲು ತಮ್ಮ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಮರಳು 2.00 ಘನ ಮೀಟರ್ ಅದರ ಮೌಲ್ಯ ರೂ.1300/- ಇರುತ್ತದೆ ಮತ್ತು ಟಿಪ್ಪರ ನಂ.ಕೆಎ-32/ಸಿ-4497 ರಲ್ಲಿನ ಮರಳನ್ನು ನಮಗೆ ಹಸ್ತಾಂತರಿಸಿ ಅದರ ಪರಿಮಾಣ ಮತ್ತು ಮೌಲ್ಯವನ್ನು ತಿಳಿಸಲು ತಮ್ಮ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಮರಳು 2.00 ಘನ ಮೀಟರ್ ಅದರ ಮೌಲ್ಯ ರೂ.1300/- ಇರುತ್ತದೆ. ಆ ಬಗ್ಗೆ ಮೌಲ್ಯಮಾಪನ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ನಾನು ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>

ಪಿ ಎಸ್ ಐ ರವರು ಮರಳನ್ನು ಮೌಲ್ಯಮಾಪನ ಮಾಡಿರುವ ಕೋರಿಕೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಮರಳನ್ನು ಯಾವ ಸಾಧನದಿಂದ ಅಳತೆ ಮಾಡಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಮೌಲ್ಯ ಮಾಪನ ಯಾವ ಆಧಾರದ ಮೇಲೆ ನಮೂದು

ಮಾಡಿಲ್ಲ ಎಂದರೆ ಸರಿ. MMRD ಇಲಾಖೆಯಿಂದ ಮರಳನ್ನು ಮೌಲ್ಯ ಮಾಪನ ಮಾಡಲು ಯಾವುದೆ ನಿರ್ದೇಶನ ಮತತು ಕೋರಿಕೆ ಪತ್ರ ನೀಡಿಲ್ಲ ಎಂದರೆ ಸರಿ. ಮರಳುನ್ನು ಮೌಲ್ಯ ಮಾಪನ ಮಾಡದೆ ಪೋಲಿಸರ ಕೋರಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**
**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ.ಇದೆ

ಪ್ರ.ದ.ನ್ಯಾ ಯಿಕ ದಂಡಾಧಿಕಾರಿಗಳು
ಜೇವರ್ಗಿ